ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ -19

5ನೇ ವರ್ಷ 19ನೇ ಸಂಚಿಕೆ ಕೊಪ್ಪ 25-1-1987 ಭಾನುವಾರ ಬೆಲೆ 50 ಪೈಸೆ

ಮಲೆನಾಡಿನಲ್ಲಿ ಮನೆ ಮಾತಾಗಿರುವ

ಹೊಚ್ಚ ಹೊಸ ಶೋರೂಂ

ಪ್ರಶಾಂತ್ ಜ್ಯೂಯೆಲರ್ಸ್

ಚಿನ್ನ, ಬೆಳ್ಳಿ ಮತ್ತು ವಜ್ರ ಮಾರಾಟಗಾರರು

ಶ್ರೀನಿಧಿ ಶಾಪಿಂಗ್ ಕಾಂಪ್ಲೆಕ್ಸ್

ಗೋಪಿ ಸರ್ಕಲ್, ಶಿವಮೊಗ್ಗ.

ಎಲ್ಲಾ ರೀತಿಯ ನವ ನವೀನ ಮಾದರಿಯ

ಆಭರಣಗಳಿಗಾಗಿ ಭೇಟಿ ಕೊಡಿ.

ಜಿಲ್ಲೆಯಿಂದ ಮಂಡಲಕ್ಕೂ ಹರಿದ ಜನತಾ-ಕಾಂಗ್ರೆ ಹಣಾಹಣಿ:

ಘರ್ಷಣೆ; ಅಂತೆ - ಕಂತೆಗಳ ಮಹಾಪೂರ

ಕೊಪ್ಪ : ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಜನತಾ ಪಕ್ಷ ಅನುಭವಿಸಿದ ಹೀನಾಯ ಸೋಲಿನಿಂದ ಆರಂಭವಾದ ಹತಾಶೆ ಹಾಗೂ ಅದೇ ಜಯವನ್ನು ಗುಡಿಸಿ ಗಂಟು ಕಟ್ಟಿಕೊಳ್ಳಲು ಕಾಂಗ್ರೆಸ್ ನಡೆಸಿದ ಎಲ್ಲಾ ಬಗೆಯ 'ಚಟುವಟಿಕೆ'ಗಳು ಒಳಗೊಳಗೇ ಕೊತ ಕೊತನೆ ಕುದಿದು, ಮೊನ್ನೆ ನಡೆದ ಮಂಡಲ ಪಂಚಾಯ್ತಿ ಚುನಾವಣೆಯ ವೇಳೆ ಅಷ್ಟಿಷ್ಟು ಉಕ್ಕಿ ಹರಿಯಿತು. ಆದರೆ ಕೊಪ್ಪದ ವಾತಾವರಣದಲ್ಲಿ ಅಂತೆ ಕಂತೆಗಳ ಮಹಾಪೂರವೇ ಹರಿಯಲು ಇಷ್ಟೇ ಸಾಕಾಯಿತು.

ಎಚ್. ಜಿ. ವೆಂಕಟೇಶ್, ಮಂಜುನಾಥ ಶೆಟ್ಟಿ ಮತ್ತು ಅವರ ಬೆಂಬಲಿಗರಿಗೂ ಕಾಂಗ್ರೆಸ್‌ನ ಕೆಲ ಪ್ರಮುಖ ಕಾರ್ಯಕರ್ತರಿಗೂ ಮೇಲಿನಪೇಟೆಯಲ್ಲಿ ಹಲವು ಬಾರಿ ಕೈ ಕೈ ಮಿಲಾಯಿಸಿ, ವೆಂಕಟೇಶ್, ಮಂ. ಶೆಟ್ಟಿ, ಮನೋಹರ, ಪ್ರಕಾಶ್ ಭಂಡಾರಿ ಇವರುಗಳ ಮೇಲೆಯೂ, ಇಕ್ಬಾಲ್, ವಿವೇಕ, ಉಮೇಶ, ಶಶಿಕುಮಾರ್, ಪ್ರಸನ್ನ ಇವರುಗಳ ಮೇಲೆಯೂ ಪರಸ್ಪರ ಪೋಲೀಸ್ ದೂರು ದಾಖಲಾಗಿವೆ.

ಈ ಹಿನ್ನೆಲೆಯಲ್ಲಿ ವೆಂಕಟೇಶ್, ಮಂ. ಶೆಟ್ಟಿ, ಮತ್ತಿತರರು ಸರಳು, ಕತ್ತಿಗಳೊಂದಿಗೆ ಕಾರು, ಜೀಪುಗಳಲ್ಲಿ ಹಳ್ಳಿಗೆ ಬಂದಿದ್ದರು ಎಂದು ಕಾಂಗ್ರೆಸ್ಸಿನವರು ಪುಕಾರು ಹಬ್ಬಿಸಿದರೆ, ಕಾಂಗ್ರೆಸ್ಸಿನವರು ಅಪಾರವಾಗಿ ಖೋಟಾ ಮತ ಚಲಾಯಿಸುವುದನ್ನು ತಡೆಗಟ್ಟಲು ತಾವು ಪ್ರಯತ್ನಿಸುತ್ತಿದ್ದಾಗ ಅವರು ಹಲವು ಬಾರಿ ತಮ್ಮ ಮೈಮೇಲೆ ಬಂದುದರಿಂದ ತಾವು ಆತ್ಮ ರಕ್ಷಣೆಗಾಗಿ ಹೆಚ್ಚು ಜನರೊಂದಿಗೆ ತೆರಳಿದ್ದಾಗಿಯೂ, ಆಯುಧಗಳನ್ನು ಒಯ್ದರೆಂಬುದು ಸುಳ್ಳು ಆರೋಪವೆಂದೂ ಜನತಾದವರ ಹೇಳಿಕೆ. ತರೀಕೆರೆ ಡಿವೈಎಸ್ಪಿಯವರೇ ಸ್ವತಃ ಅದೇ ಮತಗಟ್ಟೆಯ ಬಳಿ ಬಹಳ ಕಾಲ ಇದ್ದು, ಇಂಥ ಯಾವುದೇ ಘಟನೆಗೆ ಅವಕಾಶ ಕೊಟ್ಟಿಲ್ಲವೆಂಬುದು ಪೋಲೀಸ್ ಇಲಾಖೆಯ ಪ್ರತಿಕ್ರಿಯೆ

ಊರ ತುಂಬಾ ಹಬ್ಬಿ ತಮ್ಮದೇ ರಾಜ್ಯಭಾರ ಸ್ಥಾಪಿಸಿರುವ ಈ ಅಂತೆ ಕಂತೆಗಳು ಪೋಲೀಸ್ ಇಲಾಖೆಯ ರೌಡಿ ಶೀಟ್‌ನ ಮುಂಚೂಣಿಯಲ್ಲಿರುವವರನ್ನೇ ಸುಭಗರನ್ನಾಗಿ ಚಿತ್ರಿಸತೊಡಗಿವೆ !

ಬೆಂಕಿ ಆಕಸ್ಮಿಕ: ಬಡವನ ಮನೆ ಭಸ್ಮ

ಕೊಪ್ಪ: ಗುಣವಂತಿ ಗ್ರಾಮದ ಗೋಳಗಾರಿನಲ್ಲಿರುವ ಬಚ್ಚ ನಾಯಕ ಎಂಬವರ ಮನೆ ಜ. 16ರಂದು ಮಧ್ಯಾಹ್ನ ಸಂಭವಿಸಿದ ಬೆಂಕಿ ಆಕಸ್ಮಿಕದಿಂದ ಪೂರ್ತಿ ಸುಟ್ಟು ಹೋಯಿತು. ಆದರೆ ಮನೆಯಲ್ಲಿದ್ದ ಎರಡು ಮಕ್ಕಳು, ಒಂದು ಎತ್ತು ಪಾರಾಗಿದ್ದು, ಪಾತ್ರೆ, ಬಟ್ಟೆ, ಸಾಮಾನು, ಅಕ್ಕಿ, ಒಂದು ಕ್ವಿಂಟಾಲ್ ನಷ್ಟ ಭತ್ತ ಇವೆಲ್ಲ ಧ್ವಂಸ

ಗಂಜಿ ಬೇಯಿಸುತ್ತಿದ್ದಾಗ ಬಹುಶಃ ಸೀಮೆ ಎಣ್ಣೆ ಬಾಟ್ಲಿ ಉರುಳಿ ಭಗ್ಗನೆ ಬೆಂಕಿ ಹೊತ್ತಿದ್ದೇ ಈ ಆಕಸ್ಮಿಕಕ್ಕೆ ಕಾರಣವೆಂದು ನಂಬಲಾಗಿದೆ.

ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲಾಗಿದೆ.

ಪ್ರ.ದ. ಕಾಲೇಜು ಹಳೇ ವಿದ್ಯಾರ್ಥಿ ಸಂಘ

ಕೊಪ್ಪ: ಇಲ್ಲಿನ ಪ್ರಥಮ ದರ್ಜೆ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘ ಈಚೆಗೆ ಪ್ರಿನ್ಸಿಪಾಲ್ ಕೆ. ವಿ. ಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರಚನೆಯಾಗಿರುವುದಾಗಿ ವಿದ್ಯಾರ್ಥಿಗಳು ತಿಳಿಸಿದ್ದಾರೆ.

ಸಂಘವು ವಿದ್ಯಾರ್ಥಿ ಬರಹಗಳ ಒಂದು ಕಿರು ಹೊತ್ತಗೆಯ ಪ್ರಕಟಣೆ ಮತ್ತು ಹಳೇ ವಿದ್ಯಾರ್ಥಿಗಳ ಸಂಘಟನೆಯ ಬಗ್ಗೆ ಯೋಜನೆ ರೂಪುರೇಷೆಗಳನ್ನು ಹಾಕಿಕೊಂಡಿದೆ.

ಪದಾಧಿಕಾರಿಗಳು:- ಗೌರವ ಅಧ್ಯಕ್ಷರು -ಕೆ ವಿ ಲಿಂಗಪ್ಪ, ಪ್ರಿನ್ಸಿಪಾಲ್, ಕಾರ್ಯಾಧ್ಯಕ್ಷ-ಎಂ. ಸಿ. ಅಶೋಕ, ಉಪಾಧ್ಯಕ್ಷೆ-ಶೈಲಜಾ, ಕಾರ್ಯದರ್ಶಿ-ರವಿರಾಜ್ ಶೆಟ್ಟಿ, ಸಹಕಾರ್ಯದರ್ಶಿ-ಕೆ. ಎಸ್. ಸತ್ಯನಾರಾಯಣ ಹಾಗೂ 12 ಜನ ಕಾರ್ಯಕಾರಿ ಸಮಿತಿ ಸದಸ್ಯರು.

ಜ 26ರಂದು ಏಲಕ್ಕಿ ಮಂಡಳಿಯಲ್ಲಿ

ಏಲಕ್ಕಿ ಹರಾಜು ಇಲ್ಲ

ಸಕಲೇಶಪುರ: ಇಲ್ಲಿನ ಏಲಕ್ಕಿ ಮಂಡಳಿ ಹರಾಜು ಕೇಂದ್ರದಲ್ಲಿ ಮಾಮೂಲಿನಂತೆ ಜ. 26ರಂದು ನಡೆಯಬೇಕಿದ್ದ ಏಲಕ್ಕಿ ಹರಾಜನ್ನು ಗಣರಾಜ್ಯೋತ್ಸವದ ಪ್ರಯುಕ್ತ ಫೆ 2ಕ್ಕ ಮುಂದೂಡಿದ್ದು, ಬೆಳೆಗಾರರು ಮತ್ತು ವ್ಯಾಪಾರಿಗಳು ಸಹಕರಿಸಬೇಕಾಗಿ ಹರಾಜು ಅಧಿಕಾರಿ ಕೋರಿದ್ದಾರೆ.

ಅಂತರ್ಜಾತಿ ವಿವಾಹಕ್ಕೆ ಎ.ಐ.ಎಸ್.ಎಫ್. ಸಹಕಾರ

ಕೊಪ್ಪ: ಇಲ್ಲಿನ ಪ್ರಥಮ ದರ್ಜೆ ಕಾಲೇಜಿನ ಎ. ಐ. ಎಸ್. ಎಫ್. ವಿದ್ಯಾರ್ಥಿಗಳ ಸಹಯೋಗದೊಂದಿಗೆ ಡಿ. 29ರಂದು ಕೆ. ಎಂ. ರತ್ನ ಮತ್ತು ಲಕ್ಷ್ಮಣ ಎಂಬವರ ಅಂತರ್ಜಾತಿ ವಿವಾಹ ನೆರವೇರಿತು. ಕೂಲಿಕಾರರಾದ ಈ ಜೋಡಿ ಈಗ ಕಮ್ಮರ್ಡಿಯಲ್ಲಿ ನೆಲೆಸಿದ್ದಾರೆ. ವಿವಾಹದ ನಂತರ ಅವರು ವಿದ್ಯಾರ್ಥಿಗಳಿಗೆ ಮತ್ತು ತಾ॥ ಕಚೇರಿ ಸಿಬ್ಬಂದಿಗಳಿಗೆ ಸಿಹಿ ಹಂಚಿದರು.

ಶೃಂಗೇರಿ ವಿಧಾನಸಭಾ ಕ್ಷೇತ್ರದ ಮಂಡಲ ಪಂಚಾಯ್ತಿ ವಿಜೇತರು

ಶೃಂಗೇರಿ ತಾಲ್ಲೂಕು

ವಿದ್ಯಾರಣ್ಯಪುರ ಮಂಡಲ: ಜನತಾ -11 [ಮಲ್ಲಪ್ಪ ಗೌಡ, ಶೇಷಗಿರಿಯಪ್ಪ, ಶಿವಪ್ಪ, ಶ್ರೀಧರ ರಾವ್, ಸವಿತ, ಧರ್ಮಪ್ಪ ಗೌಡ, ಶ್ರೀಲಕ್ಷ್ಮಮ್ಮ, ವೆಂಕಟೇಶ ಗೌಡ, ತಿಮ್ಮಯ್ಯ, ಮಂಜ (ಅವಿರೋಧ), ಗಣೇಶಯ್ಯ]; ಕಾಂಗ್ರೆಸ್-6 [ಎಚ್. ಆರ್. ಸುಂದರೇಶ್, ಸುಕುಮಾರ, ತಿಮ್ಮಮ್ಮ, ರಾಮಚಂದ್ರ ಹೆಬ್ಬಾರ್, ರಾಧಮ್ಮ, ಬಿಳಿಯ]; ಪಕ್ಷೇತರ-1 [ಸೀತಾಲಕ್ಷ್ಮಿ].


ನೆಮ್ಮಾರು ಮಂಡಲ : ಜನತಾ - 5 [ಸುಧಾಕರ, ಕಾಳಯ್ಯ, ಚಂದ್ರಾವತಮ್ಮ. ಗಿಡ್ಡಮ್ಮ, ಭಾಸ್ಕರ]; ಕಾಂಗ್ರೆಸ್ - 1 [ರಾಮಗೌಡ (ಅವಿ)]

ಮೆಣಸೆ ಮಂಡಲ : ಜನತಾ - 9 [ಬೋಬಣ್ಣ, ಶಕುಂತಳ, ಶಿವಣ್ಣ ಹೆಗ್ಡೆ, ಕರಿಯಪ್ಪ ಗೌಡ, ಸುರೇಂದ್ರ, ಚನ್ನ, ಕೃಷ್ಣ, ಶ್ರೀನಿವಾಸಯ್ಯ ಎಂ ಆರ್. ಅಚ್ಯುತ]; ಕಾಂಗ್ರೆಸ್ - 6 [ರಘುಪತಿ, ಮಾಧವರಾವ್, ಪುಷ್ಪ ಚಿದಂಬರ್, ಕಿಟ್ಟಿ. ಕೆ. ಎಂ. ಕೃಷ್ಣಪ್ಪ, ವಿ. ಎಸ್. ಶ್ರೀಮತಿ]; ಪಕ್ಷೇತರ - 3 [ಗಾಯತ್ರಿ, ಚಿನ್ನಯ್ಯ ಹೆಗ್ಡೆ, ತಮ್ಮಯ್ಯ].

ಮರ್ಕಲ್ ಮಂಡಲ : ಜನತಾ-5 [ನಾಗಗೌಡ, ವೆಂಕಟೇಶ್, ಗೀತಾ ಶ್ರೀನಿವಾಸ್. ಪುಡಿಯ, ನಾಗವೇಣಿ]; ಕಾಂಗ್ರೆಸ್-13 [ಸುಬ್ಬಣ್ಣ ಗೌಡ, ಸರಸ್ವತಿ ರಾವ್, ಬುಡನ್ ಸಾಹೇಬ್, ಸಿದ್ದ, ಕೃಷ್ಣಮೂರ್ತಿ, ವಿಜಯಹೆಗ್ಡೆ, ಸುಶೀಲಮ್ಮ ವೆಂಕಟೇಶ ಗೌಡ, ಮಂಜಪ್ಪ, ಹೂವಪ್ಪ ಗೌಡ, ಚಂದ್ರಹಾಸ ಗೌಡ, ಪದ್ಮ, ಚಂದ್ರಶೇಖರ ನಾಯ್ಕ].

(4ನೇ ಪುಟ ನೋಡಿ)

(ನ. ರಾ. ಪುರ ತಾ॥ ಮುಂದಿನ ವಾರ)



ಪೂಜೆ, ಸ್ತುತಿ, ಮೆರವಣಿಗೆಗಳಿಂದ ಮುಚ್ಚಿಹೋಗುತ್ತಿರುವ

ಸ್ವಾಮಿ ವಿವೇಕಾನಂದರು ಮತ್ತು ಅವರ ವಿಚಾರಗಳು



ಜನವರಿ 12 ಸ್ವಾಮಿ ವಿವೇಕಾನಂದರ ಜನ್ಮದಿನ. ದೇಶದಾದ್ಯಂತ ಈ ದಿನವನ್ನು ವೈಭವದಿಂದ ಆಚರಿಸಲಾಗುತ್ತಿದೆ. ಆದರೆ ಈ ಉತ್ಸವ, ಆಡಂಬರಗಳ ಮರೆಯಲ್ಲಿ, ಸರ್ವಸಮನ್ವಯ, ವಿಶ್ವ ಮಾನವತೆಗಳನ್ನು ಪ್ರತಿಪಾದಿಸಿದ ಅವರ ಮಾನವೀಯವೂ, ವೈಜ್ಞಾನಿಕವೂ ಆದ ವಿಚಾರಗಳನ್ನು ಈ ದೇಶದ ಬುದ್ಧಿವಂತ ವರ್ಗ ವ್ಯವಸ್ಥಿತವಾಗಿ ಮುಚ್ಚಿ ಹಾಕುತ್ತ, ಅವರನ್ನೊಂದು ಪೂಜಾ ವಸ್ತುವನ್ನಾಗಿಸುತ್ತಿದೆ

ಜನವರಿ 12 ಸ್ವಾಮಿ ವಿವೇಕಾನಂದರ ಜನ್ಮ ದಿನ. ಈ ದಿನವನ್ನು ನಮ್ಮ ಕೇಂದ್ರ ಸರ್ಕಾರದ ಯುವಜನ ಸೇವಾ ಇಲಾಖೆ 'ರಾಷ್ಟ್ರೀಯ ಯುವದಿನ'ವಾಗಿಯೂ, ಆನಂತರದ ವಾರವನ್ನು 'ಯುವ ಸಸ್ತಾಹ'ವನ್ನಾಗಿಯೂ ಆಚರಿಸುತ್ತಿದೆ.

ಪ್ರಶಸ್ತತೆ

ರಾಷ್ಟ್ರೀಯ ಯುವದಿನವೊಂದನ್ನು ಆಚರಿಸುವುದೇ ಆದ್ದಲ್ಲಿ ಅದಕ್ಕೆ ವಿವೇಕಾನಂದರ ಜನ್ಮ ದಿನ ಅತ್ಯಂತ ಪ್ರಶಸ್ತವಾದುದು ಎಂಬುದು ನಿರ್ವಿವಾದ. ಕೇವಲ ಘೂವತ್ತೊಂಬತ್ತುವರೆ ವರ್ಷ ಬದುಕಿದ ವಿವೇಕಾನಂದರು, ಭಾರತೀಯ ಸಮಾಜ ದಾಸ್ಯ, ಕೀಳರಿಮೆಗಳಿಂದ ಸರ್ವ ನಾಶದ ಅಂಚಿನಲ್ಲಿದ್ದಾಗ ಜನತೆಯಲ್ಲಿ, ಮುಖ್ಯವಾಗಿ ಯುವ ಜನತೆಯಲ್ಲಿ, ಆತ್ಮಾಭಿಮಾನವನ್ನೂ, ಸ್ಥೈರ್ಯವನ್ನೂ, ವೈಚಾರಿಕ ಪ್ರಜ್ಞೆಯನ್ನೂ, ಸಮಾಜದೊಳಗಿನ ಕಳಂಕ ಪೂರಿತ ಆಚರಣೆಗಳ ಬಗ್ಗೆ ಜಾಗೃತಿಯನ್ನೂ ಮೂಡಿಸುವ ಸಲುವಾಗಿ ನಡೆಸಿದ ಚಟುವಟಿಕೆಗಳು, ಕಾರ್ಯಕ್ರಮಗಳು, ಅವರು ಆರಂಭಿಸಿದ ಆಂದೋಳನ, ಸಂಸ್ಥೆ-ಸಂಘಟನೆಗಳು ಇಂದಿಗೂ ಸಹ ನಮಗೆ–ಯುವ ಜನತೆಗೆ–ಬಹಳವಾಗಿ ದಾರಿದೀಪವಾಗಿವೆ.

ದೇಶದ ಸಾಮಾಜಿಕ ಜೀವನ ಮತ್ತೊಮ್ಮೆ ಅಧಃ ಪತನದ ಅಂಚಿನಲ್ಲಿದೆಯೇನೋ ಎನ್ನುವಂತೆ ಭಾಸವಾಗುತ್ತಿರುವ ಇಂದಿನ ಕಾಲ ಘಟ್ಟದಲ್ಲಿ ವಿವೇಕಾನಂದರ ಜೀವನ, ಅವರ ಎಲ್ಲ ವಿಚಾರಗಳು ಮತ್ತು ಚಟುವಟಿಕೆಗಳು ಬೆಳೆದು ಬಂದ ಬಗೆ, ಅವರ ಬೋಧನೆಗಳು–ಇವನ್ನು ಯಾವುದೇ ವಿಕೃತಿ ಅಥವಾ ಪೂರ್ವಾಗ್ರಹಕ್ಕೆ ಆಸ್ಪದವಿಲ್ಲದಂತೆ ಸರಿಯಾದ ರೀತಿಯಲ್ಲಿ ನಮ್ಮ ಯುವಜನಕ್ಕೆ ಅರ್ಥಮಾಡಿ ಕೊಡುವುದಾದರೆ ಅವರ ಜನ್ಮದಿನದ ರಾಷ್ಟ್ರೀಯ ಆಚರಣೆ ಅರ್ಥಪೂರ್ಣವಾದೀತು.

ಬರೀ 'ಆಚರಣೆ'ಯಾದರೆ....

ಆದರೆ ಎಲ್ಲ ಮೇಲ್ಪಂಕ್ತಿಕಾರರ, ಎಲ್ಲ ಉನ್ನತ ಆದರ್ಶಗಳ, 'ದಿನ' ಆಚರಿಸಿದಂತೆಯೇ ಈ ಒಂದು 'ದಿನ'ವನ್ನೂ ಕೇವಲ ಮತ್ತೊಂದು 'ಆಚರಣೆ'ಯಿಂದಷ್ಟೆ ಮುಗಿಸುವುದಾದಲ್ಲಿ, ಅದಕ್ಕೂ ವಿವೇಕಾನಂದರ ಅಪೂರ್ವವಾದ ಜೀವನಕ್ಕೂ ಯಾವ ಸಂಬಂಧವೂ ಇರುವುದಿಲ್ಲ.

ಈ ಹಿನ್ನೆಲೆಯಲ್ಲಿ ಯೋಚಿಸುವಾಗ ವಿವೇಕಾನಂದರ ನಿಜವಾದ ವ್ಯಕ್ತಿತ್ವ, ವಿಚಾರ, ಸಂದೇಶಗಳಿಗೂ, ಈಗ ಅವರನ್ನು ಚಿತ್ರಿಸುತ್ತಿರುವ ರೀತಿಗೂ ಸ್ವಲ್ಪ ಹೋಲಿಸಿ ಮುಖ್ಯಾಂಶವನ್ನು ಮನನ ಮಾಡಿಕೊಳ್ಳಬೇಕಾಗುತ್ತದೆ.

ವಿಕೃತ ಚಿತ್ರ

ಸ್ವಾಮಿ ವಿವೇಕಾನಂದರೆಂದರೆ "ಕೇವಲ ಒಬ್ಬ ಹಿಂದೂಸನ್ಯಾಸಿ, ತಪಸ್ವಿ, ಮತಪ್ರಚಾರಕ, ಮಹರ್ಷಿ, ದೈವೀಶಕ್ತಿಯುಳ್ಳ ಪವಾಡ ಪುರುಷ, ಅಷ್ಟೇಕೆ, ಹೆಚ್ಚು–ಕಡಿಮೆ ಒಬ್ಬ ಮಠಾಧಿಪತಿ ಅಥವಾ ಧರ್ಮ ಗುರು–ಎಂಬ ಕಲ್ಪನೆ ನಮ್ಮ ಮನಸ್ಸಿನಲ್ಲಿ ಮೂಡುವಂತೆ ಈಚಿನ ದಶಕಗಳಲ್ಲಿ ಅವರನ್ನು ಚಿತ್ರಿಸಲಾಗುತ್ತಿದೆ. "ಅವರು ಕನ್ಯಾಕುಮಾರಿಯಲ್ಲಿ ಸಮುದ್ರ ಮಧ್ಯದಲ್ಲಿ ಉಗ್ರ ತಪಸ್ಸನ್ನಾಚರಿಸಿದರು; ಆನಂತರ ಅವರು ಹಿಂದೂ ಧರ್ಮದ ಕೀರ್ತಿ ಪತಾಕೆಯನ್ನು ಜಗತ್ತಿನಲ್ಲೆಲ್ಲಾ ಹಾರಾಡಿಸಿದರು; ಸನಾತನ ಧರ್ಮದ ಶ್ರೇಷ್ಠತೆಯನ್ನು ಇಡೀ ಜಗತ್ತಿಗೇ ಎತ್ತಿ ತೋರಿಸಿದರು; ದೇಶದಲ್ಲೆಲ್ಲಾ ಸಂಚಾರ ಮಾಡಿ ಧರ್ಮವನ್ನು ಪ್ರಚಾರ ಮಾಡಿದರು, ಧರ್ಮ ಸಂಸ್ಥೆಗಳನ್ನು ಸ್ಥಾಪಿಸಿದರು...." ಮುಂತಾಗಿ ಹೇಳುತ್ತ, ಅವರೂ ನಮ್ಮಂತೆಯೇ ಒಬ್ಬ ಮನುಷ್ಯರೆಂಬುದನ್ನೂ, ಅಪಾರವಾದ ಅಧ್ಯಯನ, ವಿಮರ್ಶೆ ಮತ್ತು ಸಾಧನೆಗಳಿಂದ, ತಾವು ತಮ್ಮ ಅನುಭವದಿಂದಲೇ ಕಂಡುಕೊಂಡ ಸತ್ಯವನ್ನಷ್ಟೇ ಅವರು ಬೋಧಿಸಿದರೆಂಬುದನ್ನೂ, ನಿಜವಾದ ವೇದಾಂತದ ತತ್ವಗಳನ್ನು ಎತ್ತಿ ಹಿಡಿಯುವುದರ ಜೊತೆಗೆ ನಮ್ಮ ಸಮಾಜವು ಧರ್ಮ–ಶಾಸ್ತ್ರ–ಪುರಾಣಗಳ ಹೆಸರಿನಲ್ಲಿ ರೂಢಿಸಿಕೊಂಡು ಬಂದಿರುವ ಸ್ವಾರ್ಥಮಯವಾದ ಎಲ್ಲಾ ಕಂದಾಚಾರ–ಕ್ಷುದ್ರ ವಿಚಾರಗಳನ್ನೂ ಸಹ ನಿರ್ಭೀತವಾಗಿ, ಖಂಡ–ತುಂಡವಾಗಿ ಬಯಲಿಗೆಳೆದರೆಂಬುವನ್ನೂ ಬಹಳ ನಾಜೂಕಾಗಿ ಮುಚ್ಚಿ ಹಾಕಲಾಗಿದೆ

ವಾಸ್ತವ ಮುಖ

ಹೀಗಾಗಿ ಇಂದಿನ ಪೀಳಿಗೆಯವರಿಗೆ–ಅವರು ಆಸ್ತಿಕತೆ–ಧಾರ್ಮಿಕತೆಯ ಹೆಸರಿನಲ್ಲಿ ಇಂದು ನಡೆಯುತ್ತಿರುವ ಅಧಾರ್ಮಿಕತೆಯನ್ನೇ ಪ್ರತಿಪಾದಿಸಿದ ಮತ್ತೊಬ್ಬ ಧರ್ಮ ಗುರುವಿನಂತೆ ಕಾಣುವಂತಾಗಿದೆಯೇ ಹೊರತು, ಅವರ ಅಪಾರ ಮಾನವೀಯ ಕಳಕಳಿಯಾಗಲಿ, ಶುದ್ಧವಾದ ಆಧ್ಯಾತ್ಮಿಕ ನಿಲುವಾಗಲಿ, ಪರಲೋಕದ ಭ್ರಮೆಗಿಂತ ಇಹಲೋಕದ ಜೀವನದಲ್ಲಿ ಪ್ರತಿಯೊಬ್ಬ ಮಾನವನೂ ಆತ್ಮ ಗೌರವ, ಸಂತೃಪ್ತಿಗಳಿಂದ ಬಾಳಲು ಬೇಕಾದಂಥ ಪರಿಸ್ಥಿತಿಯ ನಿರ್ಮಾಣಕ್ಕಾಗಿ ಅವರು ಪಟ್ಟ ಸತತವಾದ ಶ್ರಮವಾಗಲಿ ತಿಳಿಯಲಾರದಂತಾಗಿವೆ.

ಅವರ ಉನ್ನತ ಆದರ್ಶ ಮತ್ತು ಸಾಧನೆಗಳಿಂದ ಕೂಡಿದ ಜೀವನದ ಈ ವಾಸ್ತವ ಮುಖದ ಕಿರು ಪರಿಚಯ ಮಾಡಿಕೊಡುವುದು ಈ ಲೇಖನದ ಉದ್ದೇಶ.

ಜೀವನವ ಆದರಿಸಿದ ಸಂನ್ಯಾಸಿ

'ವಿವೇಕಾನಂದರು ಕೇವಲ ವೇದವೇದಾಂತಗಳ ಕೊಂಡಾಟದಿಂದಲೇ ತೃಪ್ತರಾದ ಮತಾಭಿಮಾನಿಯಲ್ಲ. ವೈದಿಕ ತತ್ವಗಳು ಮೇರು ಪರ್ವತದಂತಿದ್ದರೇನು; ವೇದ ಮಾರ್ಗಿಗಳೆಂದು ಹೇಳಿಕೊಳ್ಳುವವರ ಜೀವನವು ಪಾಚಿ ಬೆಳೆದ ಹಳ್ಳದ ನೀರಿನಂತಿರುವವರೆಗೂ ಅವರಿಗೆ ಉಳಿಗಾಲವಿಲ್ಲ. ಹಿಂದೂ ಸಮಾಜದ ಮೈ ಮೇಲೆ ಸಾವಿರಾರು ವರ್ಷಗಳಿಂದ ಎಷ್ಟೋ ಗಂತಿಗಳೂ ಗಾಯಗಳೂ ಕಾಣಿಸಿಕೊಂಡಿವೆ; ಎಷ್ಟೋ ಧೂಳು, ಕೊಳೆಯೂ ತುಂಬಿ ಕೊಂಡಿವೆ. ಈ ವಿಚಾರಗಳನ್ನೆಲ್ಲ ಅದು ಪುರಾತನ ಸಂಪತ್ತೆಂದು ಭ್ರಮಿಸಿ, ಆದರಿಸಿ, ಅಪ್ಪಿಕೊಂಡಿದೆ. ಹಿಂದೂ ಸಮಾಜವು ತನ್ನ ತಮೋನಿದ್ರೆಯಿಂದೆದ್ದು ಕಣ್ದೆರೆದು ಸುತ್ತ ಮುತ್ತಲಿನ ಪ್ರಪಂಚವನ್ನು ನೋಡಬೇಕು; ಕೈ ಕಾಲುಗಳನ್ನು ಕೊಡಹಿ ಓಡಾಡ ಬೇಕು; ಜಡತೆಯೇ ಶಾಂತಿಯೆಂಬುದನ್ನೂ, ಜೀರ್ಣತೆಯೇ (ಹಳತಾಗಿ ಶಿಥಿಲವಾಗಿರುವುದು) ಪೂಜ್ಯತೆಯೆಂಬುದನ್ನೂ ಬಿಡಬೇಕು.... ಹೀಗೆಂದು ಸಾರಿ, ಸಮಾಜ ಸುಧಾರಣೆಗಳ ಆವಶ್ಯಕತೆಯನ್ನು ತೋರಿಸಿ ಕೊಡಲು ಅವರು ಸ್ವಲ್ಪವೂ ಹಿಂಜರಿದವರಲ್ಲ. ಸ್ವಧರ್ಮದಲ್ಲಿನ ನಿಜವಾದ ಶ್ರೇಷ್ಠ ಅಂಶಗಳನ್ನು ಪ್ರಕಾಶಪಡಿಸಲು ಉತ್ಸಾಹಿಗಳಾಗಿದ್ದಂತೆಯೇ ಸ್ವಸಮಾಜದ ದೋಷ–ದೌರ್ಬಲ್ಯಗಳನ್ನು ತೋರಿಸಿಕೊಡುವುದರಲ್ಲೂ ಅವರು ಮುಂದಾಳಾಗಿದ್ದರು....

....ವಿವೇಕಾನಂದರು ಸಂನ್ಯಾಸಿಯಾದರೂ ಜೀವನವನ್ನು ತುಚ್ಛವೆಂದೆಣಿಸಿದವರಲ್ಲ. ಬದುಕಿನ ವಿಷಯದಲ್ಲಿ ನಮಗೆ ಆದರ–ಗೌರವಗಳಿರಬೇಕು; ಬದುಕು ಕೆಡುಕೆನ್ನದಿರಿ; ಪೌರುಷದಿಂದ ಬದುಕಿರಿ, ತೇಜಸ್ಸಿನಿಂದ ಬದುಕಿರಿ – ಹೀಗೆಂಬ ಜೀವನೋತ್ಸಾಹವು ವಿವೇಕಾನಂದರ ಭೇರಿಯಿಂದ ಧ್ವನಿತವಾಗುತ್ತಿದೆ.'

(ಡಿವಿಜಿ: 'ಕುವೆಂಪು'ರವರ "ಸ್ವಾಮಿ ವಿವೇಕಾನಂದ" ಪುಸ್ತಕದ ಮುನ್ನುಡಿಯಿಂದ)

ವಿವೇಕಾನಂದರು ಕನ್ಯಾಕುಮಾರಿಯಲ್ಲಿ ತಪಸ್ಸು ಮಾಡಿದರೆಂದು ಕೇಳಿದ್ದೇವಲ್ಲ, ಅವರು ಏನನ್ನು ಕುರಿತು ತಪಸ್ಸು ಮಾಡಿದರು? ಸ್ವರ್ಗ ಪ್ರಾಪ್ತಿಗಾಗಿಯೇ? ಮೋಕ್ಷವನ್ನು ಬೇಡಿದರೆ? ಅಥವಾ ಕೇವಲ ಸ್ವಂತ ಆತ್ಮೋನ್ನತಿಗಾಗಿ ಧ್ಯಾನಿಸಿದರೆ? ಅವರು ನಿಜವಾಗಿ ಅಲ್ಲಿ ಮಾಡಿದ್ದೇನು?

ವಾಸ್ತವ ಚಿತ್ರಣ ಇಲ್ಲಿದೆ ನೋಡಿ:

'ಸ್ವಾಮಿ ವಿವೇಕಾನಂದರಿಗಿದ್ದ ಯೋಗ್ಯತೆ ಕೇವಲ ಸಂಸ್ಕೃತ ಪಾಂಡಿತ್ಯ ಮಾತ್ರವಲ್ಲ, ಇಂಗ್ಲೀಷ್ ವಾಗ್ಮಿತೆ ಮಾತ್ರವಲ್ಲ, ಅಥವಾ ಧರ್ಮಾಭಿಮಾನ ಮಾತ್ರವಲ್ಲ. ಈ ಶಕ್ತಿಗಳೆಲ್ಲದರ ಜೊತೆಗೆ ಅವುಗಳಲ್ಲೆಲ್ಲಾ ದೊಡ್ಡದಾಗಿ, ಧರ್ಮಮೂಲದ ನಿಶ್ಚಯ ಜ್ಞಾನ ಮತ್ತು ಅಂಥಾ ನಿಶ್ಚಯ ಜ್ಞಾನದೊಡನೆ ಬರುವ ಗಂಡೆದೆಯ ಧೈರ್ಯ ಅವರದಾಗಿತ್ತು. ವಿವೇಕಾನಂದರು ಸ್ವಾಭಾವಿಕವಾಗಿ ಅದ್ಭುತ ಪ್ರತಿಭಾ ಸಂಪನ್ನರು. ಅವರು ಸಂಸ್ಕೃತದಲ್ಲಿ ವ್ಯಾಕರಣ, ತರ್ಕಶಾಸ್ತ್ರಗಳನ್ನು ಸಾಂಗವಾಗಿ ಅಭ್ಯಾಸ ಮಾಡಿದ್ದರು. ಹಾಗೆಯೇ ಇಂಗ್ಲೀಷಿನಲ್ಲಿ ಕಾವ್ಯ ಇತಿಹಾಸಗಳನ್ನೂ ವಿಜ್ಞಾನ ಶಾಸ್ತ್ರ ತತ್ವ ಮೀಮಾಂಸೆಗಳನ್ನೂ ವಿಸ್ತಾರವಾಗಿ ಪರಾಮರ್ಶಿಸಿ ತಮ್ಮದಾಗಿಸಿ ಕೊಂಡಿದ್ದರು. ಈ ಪ್ರಾವೀಣ್ಯಕ್ಕೆ ತಕ್ಕ ಮಾತಿನ ಧೋರಣೆ, ಅದಕ್ಕೊಪ್ಪುವ ಉಚ್ಚಧ್ವನಿ, ಉನ್ನತವಾದ, ವರ್ಚಸ್ವಿಯಾದ ಗಂಭೀರ ಮೈಕಟ್ಟು, ಎಲ್ಲರ ಮನವನ್ನೂ ಗೆಲ್ಲಬಲ್ಲ ಹಾಸ್ಯ ವಿನೋದ ರಸಿಕತೆ, ಹೃದಯವಿದ್ರಾವಕವಾದ, ಸುಶ್ರಾವ್ಯವಾದ, ಶಾಸ್ತ್ರೀಯವಾದ ಸಂಗೀತ ಮಾಧುರ್ಯ–ಇವೆಲ್ಲವೂ ಅವರಲ್ಲಿ ಒಂದುಗೂಡಿದ್ದವು. (—ಡಿ. ವಿ. ಜಿ.)

ಕೆ. ಗಣೇಶ ಪಟವರ್ಧನ್

"ಜೊತೆಗೆ, ರಾಮಕೃಷ್ಣ ಪರಮಹಂಸರ ಮಾರ್ಗದರ್ಶನದಲ್ಲಿ ಅವರು ಅಪಾರವಾದ ಆತ್ಮಶಕ್ತಿಯನ್ನೂ ದೃಢನಿಶ್ಚಲವಾದ ಏಕಾಗ್ರತೆಯನ್ನೂ ಗಳಿಸಿಕೊಂಡಿದ್ದರು; ವೇದ–ವೇದಾಂತಗಳನ್ನು ಸಮಗ್ರವಾಗಿ ಅಭ್ಯಸಿಸಿ ಅವುಗಳ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡಿದ್ದರು; ಸರ್ವಧರ್ಮ ಸಮತಾಭಾವವನ್ನೂ, ಆಧ್ಯಾತ್ಮ ವಿಚಾರಗಳಲ್ಲಿ ಹೇಗೋ ಹಾಗೇ ವ್ಯಾವಹಾರಿಕ ವಿಷಯಗಳಲ್ಲೂ ಸಹ ಬುದ್ಧಿ ಸೂಕ್ಷ್ಮತೆಯನ್ನೂ ಸಿದ್ಧಿಸಿಕೊಂಡಿದ್ದರು.

ದೇಶ ಪರ್ಯಟನ

ಇದಿಷ್ಟೇ ಸಾಲದೆಂದರೆ, ರಾಮಕೃಷ್ಣರ ಮರಣದ ನಂತರ ಜನವರಿ 1887 ರಿಂದ ಜನವರಿ 1893ರವರೆಗೆ ಸತತ ಆರು ವರ್ಷಗಳ ಕಾಲ, ಹಿಮಾಲಯದಿಂದ ಹಿಡಿದು ಕನ್ಯಾಕುಮಾರಿಯವರೆಗೆ ಇಡೀ ಭಾರತದ ಪರ್ಯಟನ ಮಾಡಿ ತೀರ್ಥಕ್ಷೇತ್ರಗಳು, ಇತಿಹಾಸದ ಪ್ರಸಿದ್ಧ ನಗರಿಗಳು, ಪಾಳು ಬಿದ್ದ ಪುರಾತನ ಪಟ್ಟಣಗಳು-ರಾಜಧಾನಿಗಳು, ಮಹಾ ನದಿಗಳು, ಹಿಂದೂ, ಜೈನ, ಬೌದ್ಧ, ಮುಸಲ್ಮಾನ ಕಾಲಕ್ಕೆ ಸೇರಿದ್ದ ವಾಸ್ತುಶಿಲ್ಪಗಳು—ಇತ್ಯಾದಿಯಾಗಿ ಎಲ್ಲವನ್ನೂ ನೋಡಿಕೊಂಡು ಇದೀಗ ಕಟ್ಟಕಡೆಯದಾಗಿ ಕನ್ಯಾಕುಮಾರಿಗೆ ಬಂದಿದ್ದರು.

(ಮುಂದಿನ ಪುಟಕ್ಕೆ)

ಸ್ವಾಮಿ ವಿವೇಕಾನಂದರು ಮತ್ತು ಅವರ ವಿಚಾರಗಳು

(2ನೇ ಪುಟದಿಂದ)

ಇಷ್ಟೊತ್ತಿಗಾಗಲೇ ಅವರಿಗೆ ಭರತಖಂಡದ ಆಮೂಲಾಗ್ರವಾದ ಅನುಭವ ಆಗಿತ್ತು. ಅವರು ರಾಜರ ಅರಮನೆಗಳಲ್ಲಿದ್ದರು. ಬಡವರ ಗುಡಿಸಲುಗಳಲ್ಲಿದ್ದು, ಅವರು ಕೊಟ್ಟ ಕಾರ್ಪಣ್ಯದ ಊಟವನ್ನು ತಿಂದರು. ಗುಡಿಸಲು ಬಡತನದಲ್ಲಿದ್ದರೂ ಅವರ ಉದಾರ ಹೃದಯವನ್ನು, ಅವರ ಸರಳ ಜೀವನದಲ್ಲಿದ್ದ ಪ್ರೀತಿ, ವಿಶ್ವಾಸ ಸಹಾನುಭೂತಿಗಳನ್ನು ಪ್ರತ್ಯಕ್ಷ ಮನಗಂಡಿದ್ದರು. ನಮ್ಮ ಪುಣ್ಯ ಗ್ರಂಥಗಳಲ್ಲಿ ಹುದುಗಿರುವ ವಿಷಯವನ್ನು ಅರಿತರು.

ದೇಶವನ್ನು ಅಲೆಯುವಾಗ, ಧರ್ಮದ ಹೆಸರಿನಲ್ಲಿ ಕೆಲಸಕ್ಕೆ ಬಾರದ ಮೂಢ ನಂಬಿಕೆಗಳು, ಆಚಾರಗಳು ಈ ಕಳೆಗಳಿಂದಲೇ ತುಂಬಿ ಹೋಗಿ ಮೂಲವಾದ ಮರ ಯಾವುದು ಎಂಬುದೇ ತಿಳಿಯದಂತಾಗಿರುವುದನ್ನು ಹೆಜ್ಜೆ ಹೆಜ್ಜೆಗೂ ಕಂಡರು. ವೈವಿಧ್ಯಪೂರ್ಣವಾದ ಅನುಭವಗಳನ್ನು ಪಡೆದುಕೊಂಡು, ನಮ್ಮ ಗತಕಾಲದ ವೈಭವ, ಈಗಿನ ಅಧೋಗತಿ, ಮುಂದೆ ವೈಭವಯುಕ್ತವಾದ ರಾಷ್ಟ್ರ ನಿರ್ಮಾಣಕ್ಕೆ ನಾವು ಮಾಡಬೇಕಾದುದೇನು ಎಂಬುದನ್ನೆಲ್ಲ ಮನನ ಮಾಡುತ್ತ ಕನ್ಯಾಕುಮಾರಿಯ ದೇವಸ್ಥಾನದ ಕಡೆ ಸಾಗಿದರು.

ದೇವಸ್ಥಾನದಲ್ಲಿ ದೇವಿಗೆ ನಮಿಸಿ, ಸ್ವಲ್ಪ ಹೊತ್ತು ಧ್ಯಾನಿಸಿ ಹೊರಗೆ ಬಂದು, ಒಂದು ನಿರ್ಜನ ಪ್ರದೇಶದಲ್ಲಿ ಕೆಲವು ಕಾಲ ಧ್ಯಾನದಲ್ಲಿ ಕಳೆಯಬೇಕೆಂದುಕೊಂಡರು. ದೇವಾಲಯದ ಮುಂದೆ, ಸಮುದ್ರ ಮಧ್ಯದಲ್ಲಿ ಎದ್ದು ನಿಂತಿದ್ದ ಒಂದು ಭೀಮಾಕಾರದ ಬಂಡೆ ಪ್ರಶಸ್ತವೆನಿಸಿತು. ದೋಣಿಯಲ್ಲಿ ಹೋಗಲು ಹಣವಿಲ್ಲದ್ದರಿಂದ ಸಮುದ್ರದಲ್ಲಿ ಈಜಿಕೊಂಡೇ ಬಂಡೆಗೆ ಹೋಗಿ ತಲುಪಿದರು. **ಅಲ್ಲಿ ಕುಳಿತು ದೀರ್ಘ ಧ್ಯಾನದಲ್ಲಿ ತನ್ಮಯರಾದವರು ಮುಂದೇನುಮಾಡಬೇಕು ಎಂಬುದನ್ನು ನಿಶ್ಚಯಿಸಿದರು**

ಭರತಖಂಡದ ಸ್ಥಿತಿ

ಬಂಡೆಯ ಮೇಲೆ ಕುಳಿತು ಭರತಖಂಡದ ವಿಷಯವಾಗಿ ಚಿಂತಿಸತೊಡಗಿದರು. ಭರತಖಂಡದ ಅಧಃಪತನಕ್ಕೆ ಮೂಲ ಕಾರಣವನ್ನು ಯೋಚಿಸತೊಡಗಿದರು. ಎಲ್ಲಾ ಭಾಷೆಗಳು, ಪ್ರಾಂತ್ಯಗಳು, ಜನರು, ಹಿಂದಿನದು ಮತ್ತು ಈಗಿನದು — ಈ ಎಲ್ಲವನ್ನೂ ಒಂದು ಮಾಡಿದ ಹಿಂದೂ ಸಂಸ್ಕೃತಿಯ ಸೂತ್ರ ಯಾವುದೆಂದು ಅರಿವಾಯಿತು. ಧರ್ಮವೇ ಭಾರತೀಯನ ಪ್ರಾಣದುಸಿರು. ಆದರೆ ಇಂದು ಭರತಖಂಡದಲ್ಲಿರುವ ದಟ್ಟ ದಾರಿದ್ರ್ಯಕ್ಕೆ ಮೂಲ ಕಾರಣ ಅರ್ಥವಾಯಿತು. ಧರ್ಮ ಲಕ್ಷೋಪಲಕ್ಷ ಸಾಮಾನ್ಯ ಜೀವಿಗಳ ಸಹಾಯಕ್ಕೆ ಬರದಿದ್ದರೆ ಅದರಿಂದೇನು ಪ್ರಯೋಜನ? ಪುರೋಹಿತರು ಮತ್ತು ಮೇಲಿನ ವರ್ಗದವರ ದುಷ್ಟತನ ಕೆಳಗಿನವರ ಪ್ರಾಣವನ್ನೆಲ್ಲ ಹೀರಿತು. ಇವರೇ ಭರತ ಖಂಡದ ಉನ್ನತಿಗೆ ಕಂಟಕಪ್ರಾಯರಂತೆ ಕಂಡರು. ಯಾವ ಧರ್ಮ ರಕ್ಷಕರೆಂದು ಹೆಮ್ಮೆ ಕೊಚ್ಚಿಕೊಳ್ಳುತ್ತಿರುವರೋ, ಅವರು ಸಾಧಾರಣ ಜನರಿಗೆ ಧರ್ಮದ ತಿರುಳನ್ನು ಕೊಡಲಿಲ್ಲ, ಯಾವಾಗಲೂ ಅವರನ್ನು ಬಂಧನದಲ್ಲಿ ಕಟ್ಟಿ ಹಾಕಿದರು........

ನಮ್ಮಂತೆ ಹಲವು ಸಂನ್ಯಾಸಿಗಳು ಸಂಚಾರ ಮಾಡುತ್ತ ತತ್ವ ಬೋಧನೆಯನ್ನು ಮಾಡುತ್ತೇವಲ್ಲ, ಇದು ಹುಚ್ಚುತನ. ಹಸಿದವರಿಗೆ ಧರ್ಮ ಹಿಡಿಸಲು ಸಾಧ್ಯವಿಲ್ಲ ಎಂದು ಗುರುದೇವ ರಾಮಕೃಷ್ಣರು ಹೇಳುತ್ತಿದ್ದರಲ್ಲ. ಬಡವರು ಪಶುಗಳಂತೆ ಜೀವಿಸುತ್ತಿರುವರು ಇದಕ್ಕೆ ಅಜ್ಞಾನವೇ ಕಾರಣ. ಅನೇಕ ಶತಮಾನಗಳಿಂದ ನಾವು ಅವರ ರಕ್ತವನ್ನು ಹೀರಿದ್ದೇವೆ, ಅವರನ್ನು ಕಾಲಿನಿಂದ ತುಳಿದಿದ್ದೇವೆ....

"ತಪಸ್ಸು": ನಾನೇನು ಮಾಡಬೇಕು?

ಪರಹಿತ ಬಯಸುವ, ಸ್ವಾರ್ಥ ರಹಿತರಾದ ಕೆಲವು **ಸಂನ್ಯಾಸಿಗಳು ಗ್ರಾಮಸಂಚಾರ ಹೊರಟು,** ಉತ್ತಮರಿಂದ ಚಂಡಾಲನವರೆಗೆ ಪ್ರತಿಯೊಬ್ಬರಿಗೂ ವಿದ್ಯಾಪ್ರಚಾರ ಮಾಡಬೇಕು. ನಾವು ಜನಾಂಗದ ವ್ಯಕ್ತಿತ್ವವನ್ನು ಕಳೆದುಕೊಂಡಿದ್ದೇವೆ. ಪ್ರತಿಯೊಂದು ದೇಶದಲ್ಲಿಯೂ ದೋಷಗಳಿವೆ. ಆದರೆ ಅವು ಧರ್ಮದಿಂದಾದವುಗಳಲ್ಲ, ಧರ್ಮ ಪರಿಪಾಲನೆಗೆ ವಿರೋಧವಾಗಿವೆ. ಇದಕ್ಕಾಗಿ ಭರತಖಂಡದಲ್ಲಿ ಧರ್ಮ ಜಾಗೃತಿಯನ್ನುಂಟುಮಾಡಬೇಕು. ಅದಕ್ಕಾಗಿ ತನ್ನ ಬಾಳನ್ನೇ ಅರ್ಪಣ ಮಾಡಬೇಕು, ತನ್ನ (ಸ್ವಂತದ) ನಿರ್ವಿಕಲ್ಪ ಸಮಾಧಿಯನ್ನೂ ಬದಿಗಿಡಬೇಕು — ಎಂಬ ದೀಕ್ಷಾ ಬದ್ಧರಾದರು....."

(ಸೋಮನಾಥಾನಂದರು ಬರೆದ 'ವಿವೇಕಾನಂದರ ಜೀವನ ಚರಿತ್ರೆ' ಗ್ರಂಥದಿಂದ; ಮೈಸೂರು ರಾಮಕೃಷ್ಣಾಶ್ರಮದ ಪ್ರಕಟಣೆ)

ಇದು ವಿವೇಕಾನಂದರು ಅಲ್ಲಿ ಮಾಡಿದ "ತಪಸ್ಸು". ಇದು ಅವರ ದೃಷ್ಟಿಯಲ್ಲಿ ಧರ್ಮಜಾಗೃತಿ. ಈ ದೃಷ್ಟಿಗೂ ಇಂದು ನಾವು ಕೇಳುತ್ತಿರುವ (ಅದೂ ವಿವೇಕಾನಂದರ ಹೆಸರಿನಲ್ಲೇ!) "ಧರ್ಮ ಜಾಗೃತಿ" "ಧರ್ಮ ಜಾಗೃತಿ" ಎಂಬ ಬೊಬ್ಬೆಗೂ ಎಲ್ಲಿಗೆಲ್ಲಿಯ ಹೋಲಿಕೆ!

ಪ್ರತಿಯೊಬ್ಬ ಮನುಷ್ಯನ ಜೀವನದ ಧ್ಯೇಯವೂ— ಆತ್ಮನ ಮೋಕ್ಷ ಮತ್ತು ಜಗದ ಹಿತ—ಇದಾಗಬೇಕು. ಇದಕ್ಕಾಗಿ ಎಲ್ಲರೂ ಬಾಳಬೇಕು, ಎಲ್ಲರೂ ಮಡಿಯಬೇಕು ಎಂಬುದು ವಿವೇಕಾನಂದರ ಜೀವನ-ಬೋಧನೆಗಳ ಬಹು ಪ್ರಧಾನ ಅಂಶಗಳಲ್ಲೊಂದು. "ಎಳ್ಳಿನಷ್ಟು ಅನುಷ್ಠಾನ ಹೊರೆಯಷ್ಟು ಮಾತಿಗಿಂತ ಮೇಲು" ಎನ್ನುತ್ತಿದ್ದ ಅವರು ಅದರಂತೆಯೇ ಸತತವಾಗಿ ನಡೆದು ತೋರಿಸಿದರು.

ಧರ್ಮ – ಅಧರ್ಮ

ಅವರ ದೃಷ್ಟಿಯಲ್ಲಿ, '**ಧರ್ಮ ಎಂದರೆ ಒಳ್ಳೆಯತನ.** ಆದರೆ ಧರ್ಮವನ್ನು ತಮ್ಮ ಹೊಟ್ಟೆಪಾಡಿಗಾಗಿ ಕೊಳಕು ಹಿಡಿಸಿ ಹಾಳುಮಾಡುವವರು ಪೂಜಾರಿಗಳು, ಪಾದ್ರಿಗಳು, ಮುಲ್ಲಾಗಳು, ಫಾರೀಸಿಗಳು; ಅಂದರೆ ಪುರೋಹಿತ ವರ್ಗ. ಆದ್ದರಿಂದಲೇ ವಿವೇಕಾನಂದರು "ಪುರೋಹಿತರನ್ನು ಒದ್ದೋಡಿಸಿ!" ಎಂದಿದ್ದಾರೆ. "ದೇವಸ್ಥಾನ, ಚರ್ಚು, ಮಸೀದಿಗಳನ್ನು ಧ್ವಂಸ ಮಾಡಿ" ಎಂದು ಒಮ್ಮೆ ಕರೆ ಕೊಟ್ಟಿದ್ದಾರೆ. ಏನು! ವಿವೇಕಾನಂದರು ಹೀಗೆಲ್ಲ ಹೇಳಿದ್ದಾರೆಯೆ? ಎಂದು ಬೆಚ್ಚುವಂತಾಗುತ್ತದೆ. ಹೌದು, ಹೇಳಿದ್ದಾರೆ. ಏಕೆಂದರೆ ಇವುಗಳೆಲ್ಲ ಪ್ರಗತಿಗೆ ಪ್ರತಿಬಂಧಕಗಳಾಗಿವೆ. (ಲೌಕಿಕ ಪ್ರಗತಿಗೆ ಮಾತ್ರವಲ್ಲ, ಧಾರ್ಮಿಕ–ಆಧ್ಯಾತ್ಮಿಕ ಪ್ರಗತಿಗೆ ಸಹ) ಅವು ಮನುಷ್ಯರನ್ನು ಒಂದುಗೂಡಿಸುವುದಕ್ಕೆ ಬದಲು ಒಡೆಯುತ್ತಿವೆ. (ಅವುಗಳ ಈ 'ಗುಣ' ಬದಲಾಗಿ ಅವು ನಿಜವಾಗಿಯೂ ಮಾನವನ ಏಳಿಗೆಗೆ ಪೂರಕವಾಗುವುದಾದಲ್ಲಿ ವಿವೇಕಾನಂದರಿಗೆ ಅವುಗಳ ಬಗ್ಗೆ ವಿರೋಧವೇನೂ ಇಲ್ಲ.)

ವಿವೇಕಾನಂದರು ಎಂಥ ಉದಾತ್ತ ವಿಚಾರವಂತರೆಂಬುದು ಗೊತ್ತಾಗಬೇಕಾದರೆ ಅವರ ಕೃತಿಗಳನ್ನು ತೆರೆದ ಮನಸ್ಸಿನಿಂದ ಓದಬೇಕು. ಅವರು ಕೇವಲ ಹಿಂದೂ ಧರ್ಮದ ವಕ್ತಾರ ಎಂಬ ಪ್ರಚಾರದ ಥಳುಕಿನ ತೆರೆಯನ್ನು ಹರಿದು, ಅವರಿಗೆ ತೊಡಿಸಿರುವ 'ಹಿಂದೂ' ಮುಖವಾಡವನ್ನು ಒಡೆದು ನೋಡಬೇಕು. (ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಮತ್ತು ಅವರು ಸ್ಥಾಪಿಸಿದ ರಾಮಕೃಷ್ಣ ಮಿಶನ್ 'ಹಿಂದೂ ಅಲ್ಲ' ಎಂದು ಕಲ್ಕತ್ತ ಹೈಕೋರ್ಟ್ ತೀರ್ಪು ಕೊಟ್ಟಿದೆ.)

ಮಾನವತಾವಾದಿ

ವಿವೇಕಾನಂದರು ಒಬ್ಬ ಮಹಾ ಮಾನವತಾವಾದಿ, ಭಗವಾನ್ ಬುದ್ಧನಂತೆ. ಅವರು ಹುಟ್ಟಿದ್ದು ಭಾರತದಲ್ಲಾದರೂ, ಜನ್ಮ ಭೂಮಿಯ ಮೇಲೆ ಅವರಿಗೆ ಅಪಾರ ಭಕ್ತಿಯಿದ್ದರೂ ಅವರ ದೃಷ್ಟಿ ಎಂದೂ ಸಂಕುಚಿತವಾಗಿರಲಿಲ್ಲ. ಅವರದು ವಿಶ್ವದೃಷ್ಟಿ; ಪ್ರಪಂಚದ ಪ್ರತಿಯೊಂದು ಭಾಗವೂ ತನ್ನ ದೇಶದ ಒಂದು ಅಂಶವೆಂಬ ಭಾವವನ್ನು ರಕ್ತಗತ ಮಾಡಿಕೊಂಡಿದ್ದ ಹೃದಯವಂತಿಕೆ ಅವರದು. ವಿಶ್ವದ ಎಲ್ಲಾ ಅತ್ಯುತ್ತಮ ವಿಚಾರಗಳ ಶ್ರೇಷ್ಠ ಸಂಗಮದಂತೆ ಅವರು ಇದ್ದಾರೆ. ಆ ಸಂಗಮ ನಿಂತ ಕೊಳವಲ್ಲ, ಅದೊಂದು ಹರಿಯುವ ಹೊಳೆ.

(ಜ.ಹೊ. ನಾರಾಯಣ ಸ್ವಾಮಿಯವರು ಸಂಪಾದಿಸಿರುವ "ವಿವೇಕಾನಂದರ ಕ್ರಾಂತಿಕಾರಿ ವಿಚಾರಗಳು" ಪುಸ್ತಕದಿಂದ)

ಶಾಂತಿಯುತ ಭವಿಷ್ಯ?

ಇಂಥ ಅದ್ಭುತ ವ್ಯಕ್ತಿತ್ವ–ವಿಚಾರ–ಸಾಧನೆಗಳ ಒಬ್ಬ ಮಹಾ ಪುರುಷರ ಕುರಿತು ನಮ್ಮ ರಾಷ್ಟ್ರೀಯ ಯುವ ಜನತೆ ಸ್ವಲ್ಪವಾದರೂ ಅರಿಯಲು, ಅದರಿಂದ ಕಲಿಯಲು ಹಾಗೆ ಕಲಿತಂತೆ ನಡೆಯಲು ಅವರ ಜನ್ಮದಿನದ ಆಚರಣೆಯಾದರೂ ಸ್ವಲ್ಪ ಪ್ರೇರಣೆ ಕೊಟ್ಟರೆ ಮಾತ್ರ ಅಂಥ ಆಚರಣೆಗೊಂದು ಬೆಲೆ. ಯುವ ಜನತೆ ಮಾತ್ರವಲ್ಲ. ತಮ್ಮ ನರಿ ಬೊಬ್ಬೆಯಿಂದ ಯುವ ಸಮುದಾಯವನ್ನು, ಅಷ್ಟೇಕೆ ಇಡೀ ದೇಶೀಯರನ್ನು ದಿಕ್ಕು ತಪ್ಪಿಸುತ್ತಿರುವ ಮಹಾ ಮಹಾ ಧರ್ಮೋದ್ಧಾರಕರೂ ಸಹ ಒಮ್ಮೆ, ಕೇವಲ ಒಮ್ಮೆ, ವಿವೇಕಾನಂದರ ಬೋಧನೆಗಳನ್ನು ಸ್ವಲ್ಪ ಸರಿಯಾಗಿ ಮನನ ಮಾಡಿದರೆ ಈ ದೇಶಕ್ಕೊಂದಿಷ್ಟು ಶಾಂತಿಯುತ ಭವಿಷ್ಯ ಉಳಿದೀತು!

ಜೈ ಜಗತ್!

ರಾಜ್ಯಗಳ ಒಕ್ಕೂಟ ರಚಿಸಿ

ನಮ್ಮ ದೇಶವೊಂದು 'ಗಣರಾಜ್ಯ'ವೆಂದು ಘೋಷಿಸಿ ಇಲ್ಲಿಗೆ 37 ವರ್ಷಗಳೇ ಕಳೆದು ಹೋದವು. ಜನತೆಯ ದೈನಂದಿನ ಜೀವನಕ್ಕೆ ಸಂಬಂಧಪಟ್ಟ ಎಲ್ಲ ವಿಚಾರಗಳಲ್ಲೂ ಸ್ವಯಂ ನಿರ್ಣಯ–ಸ್ವಯಮಾಧಿಕಾರ ಹೊಂದಿದ್ದು, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ವಿಷಯಗಳಲ್ಲಿ ಮಾತ್ರ ಕೇಂದ್ರದ ಆಳ್ವಿಕೆಗೆ ಒಳಪಟ್ಟಿರುವ ರಾಜ್ಯಗಳ ಒಂದು ಸಡಿಲವಾದ ಒಕ್ಕೂಟವೇ ಗಣತಂತ್ರ ವ್ಯವಸ್ಥೆ ಅಥವಾ ಗಣರಾಜ್ಯ ವ್ಯವಸ್ಥೆ- ಆದರೆ ತಪ್ಪಾಗಿ ಅರ್ಥೈಸಿರುವ 'ರಾಷ್ಟ್ರೀಯ ಏಕತೆ' ಎಂಬ ಪೊಳ್ಳುಪರಿಕಲ್ಪನೆಯ ಹಿಮಗಲ್ಲಿನಡಿ ನಿಜವಾದ 'ಗಣರಾಜ್ಯದ' ಸುಂದರ ಕಲ್ಪನೆ ಉಸಿರುಗಟ್ಟಿ ಹೋಗುತ್ತಿದೆ.

ಆಗಸ್ಟ್ 15, 1986ರ 'ಮುಂಗಾರು' ಸಂಪಾದಕೀಯವನ್ನು ಈ 'ಗಣರಾಜ್ಯೋತ್ಸವ'ದ ಸಂದರ್ಭಕ್ಕೆ ಇಲ್ಲಿ ಅಳವಡಿಸಿದ್ದೇವೆ —ಸಂ. ('ಮುಂಗಾರು' ಸೌಜನ್ಯ ಕೋರಿ)

ಸ್ವಾತಂತ್ರ್ಯ ಸಿಕ್ಕಿ ನಲವತ್ತು **ವರ್ಷ** ಪೂರ್ತಿಯಾಗಲು ಇನ್ನೊಂದು ವರ್ಷ **ಮಾ**ತ್ರ ಬಾಕಿ. ನಾಲ್ಕು ದಶಕಗಳ **ಕಾಲ ಸಣ್ಣ** ಅವಧಿಯೇನೂ ಅಲ್ಲ. ಒಂದು ಜನಾಂಗವು ಒಂದು ದೇಶವು ತನ್ನ ಕಾಲ **ಮೇಲೆ** ನಿಲ್ಲಲು ಸಮರ್ಥವಾಗಬೇಕಾದಂತಹ **ಅವಧಿ** ಇದು. ಇಷ್ಟು ಸುದೀರ್ಘ **ಅವಧಿಯಲ್ಲಿ** ಪ್ರಜೆಗಳಿಗೆಲ್ಲ ಸುಖ ಜೀವನವನ್ನು **ತಂದು** ಕೊಡುವುದು ಯಾವ ರಾಜ್ಯದ **ಆಳ್ವಿಕೆಗಾದ**ರೂ ಸಾಧ್ಯವಾಗಬೇಕಾಗಿತ್ತು. **ನಮಗಿಂತ** ಬಳಿಕ ಬಿಡುಗಡೆ ಪಡೆದ ಜನತಾ ಚೀನದಲ್ಲಿ ಇದು ಸಾಧ್ಯವಾಗಿದೆ. ನಮಗಿಂತ ಕಡಿಮೆ ಜನಶಕ್ತಿಯಿದ್ದ ರಷ್ಯದ ಸಮಾಜವಾದಿ ಗಣರಾಜ್ಯವು ನಾಲ್ಕು ದಶಕಗಳ ಅವಧಿಯಲ್ಲಿ ಜಗತ್ತಿನಲ್ಲೊಂದು ಮಹಾ ಶಕ್ತಿಯಾಗಿ ಎದ್ದು ನಿಂತಿತ್ತು. ಎರಡನೇ ಮಹಾಯುದ್ಧ ಕಾಲದಲ್ಲಿ ಧ್ವಂಸವಾಗಿ ಹೋಗಿದ್ದ ಜಪಾನು ಇಂದು ಜಗತ್ತಿನ ದೊಡ್ಡ ಕೈಗಾರಿಕಾ ಶಕ್ತಿಯೆನಿಸಿದೆ. ಅದೇ ಯುದ್ಧದಲ್ಲಿ ಸಹಿಸಲಾರದ ಹೊಡೆತ ತಿಂದಿದ್ದ ಯುರೋಪಿನ ದೇಶಗಳೆಲ್ಲ ಮತ್ತೆ ತಲೆಯೆತ್ತಿ ತಮ್ಮ ಕೃಷಿ-ಕೈಗಾರಿಕೆಗಳನ್ನು ಪುನರುಜ್ಜೀವನ ಮಾಡಿಕೊಂಡು ಇಂದು ಸಂಪನ್ನ ರಾಷ್ಟ್ರಗಳೆನಿಸಿವೆ.

ಇದನ್ನೆಲ್ಲ ಹೋಲಿಸಿ ನೋಡಿದರೆ ಭಾರತದ ಪ್ರಗತಿ ಅಂಬೆಗಾಲಿನದ್ದಾಗಿದೆ. ನಮ್ಮ ಆರ್ಥಿಕತೆ ಗಮನಾರ್ಹವಾದ ಸಾಧನೆಯೇನನ್ನೂ ಮಾಡಿಲ್ಲ. ಆರ್ಥಿಕತೆಯ ಮೇಲೆ ಹಿಡಿತವನ್ನು ಪಡೆಯುವುದಕ್ಕೇ ಸರಕಾರಕ್ಕೆ ಸಾಧ್ಯವಾಗಿಲ್ಲ. **ನಮ್ಮ ಯೋಜನೆಗಳಲ್ಲಿ ವೆಚ್ಚವಾದ ಹಣವೆಲ್ಲ ಯೋಜನೆಯ ಫಲದ ರೂಪದಲ್ಲಿ ಜನರಿಗೆ ಪ್ರಯೋಜನ ಕೊಡುವ ಬದಲು ನೌಕರಶಾಹಿ ಹಾಗೂ ಖಾಸಗಿ ರಂಗದ ಕೆಲವೇ ಕೈಗಾರಿಕೆ ಹಾಗೂ ವಾಣಿಜ್ಯ ಸದನಗಳ ಹೊಟ್ಟೆ ತುಂಬಿಸಿವೆ.** ನಮ್ಮ ಕೈಗಾರಿಕಾ ರಂಗವು ನಗರಗಳನ್ನು ಬೆಳೆಸಿದೆ. ನಮ್ಮ ಕೃಷಿ ರಂಗ

(ಮುಂದಿನ ಪುಟಕ್ಕೆ)

ರಾಜ್ಯಗಳ ಒಕ್ಕೂಟ ರಚಿಸಿ

(3ನೇ ಪುಟದಿಂದ)

ವು ಬೆಳೆದದ್ದಕ್ಕೆ ತಕ್ಕ ಪ್ರತಿಫಲವಿಲ್ಲದೆ ಶೋಷಣೆಗೆ ಸಿಕ್ಕಿ ಕಂಗಾಲು ಸ್ಥಿತಿಯಲ್ಲಿದೆ. ನಮ್ಮ ನ್ಯಾಯಾಂಗವು ವಿವಾದಗಳನ್ನು ನಿಭಾಯಿಸಲಾಗದೆ ಕ್ಷಿಪ್ರ ನ್ಯಾಯದಾನಕ್ಕೆ ವ್ಯವಸ್ಥೆಯನ್ನು ರೂಪಿಸಲಾಗದ ಹತಾಶೆಯ ಅಂಚಿನಲ್ಲಿದ್ದು ರೋಗಗ್ರಸ್ತವಾಗಿದೆ, ಇಂದೋ ನಾಳೆಯೋ ಕುಸಿಯುವ ಸ್ಥಿತಿಯಲ್ಲಿದೆ. ನಮ್ಮ ವಿದ್ಯಾ ಕ್ಷೇತ್ರವು ಜನರ ಅಗತ್ಯಗಳಿಗೆ ಸ್ಪಂದಿಸದೆ ಜಡ್ಡು ಹಿಡಿದು ಕೂತಿದೆ. ಇನ್ನೂ ಉಳ್ಳವರ ಸೊತ್ತಾಗಿ, ಹಣವುಳ್ಳವರು ಇನ್ನಷ್ಟು ಹಣ ಮಾಡಿಕೊಳ್ಳಲು ಬಳಸುವ ಬಂಡವಾಳ ಸಾಮಗ್ರಿಯಾಗಿದೆ. ನಮ್ಮ ವೃತ್ತಿಪರ ಕ್ಷೇತ್ರಗಳು ಸ್ವಾರ್ಥಿಗಳ ಕೈಗೆ ಸಿಕ್ಕಿ ಕುಲಗೆಟ್ಟು ಹೋಗಿವೆ.

ಈ ದೇಶದ ರಾಜಕಾರಣಿಗಳು ರೂಪಿಸಿದ ಆಡಳಿತ ವ್ಯವಸ್ಥೆ ಇದಾವುದನ್ನೂ ಸಮರ್ಪಕವಾಗಿ ನಿಭಾಯಿಸುವ, ಸುಧಾರಿಸುವ ಸಾಮರ್ಥ್ಯವನ್ನು ಹೊಂದಿಲ್ಲ. ಬುದ್ಧಿ ಬಲವಿಲ್ಲದ ಈ ಮಂದಿ ಅಧಿಕಾರವನ್ನು ಕೆಲವೇ ಕೈಗಳಲ್ಲಿ ಕೊಟ್ಟು ತಾವು ಸುಖದ ಸುಪ್ಪತ್ತಿಗೆಯನ್ನು ಅರಸಿಕೊಂಡು ಅಲೆಯುತ್ತಿದ್ದಾರೆ. ಅಧಿಕಾರವು ದೇಶದ ಪ್ರಗತಿಯ ಪ್ರಕ್ರಿಯೆ ನಡೆಯುವ ಕಾರ್ಯಾಗಾರವಾಗುವ ಬದಲು ಸುಖ ಸಂಪತ್ತಿನ ರಸಾಯನವನ್ನು ಸೂರೆ ಹೊಡೆಯುವ ತಾಣವಾಗಿವೆ. ರಾಜಕಾರಣಿಗಳ ಗೈರುಹಾಜರಿಯಲ್ಲೇ ಆಡಳಿತ ನಡೆಯುತ್ತಿದೆ. ಅಧಿಕಾರಿಗಳ ಸಮುದಾಯ ಆಳ್ವಿಕೆಯ ಸೂತ್ರ ಹಿಡಿದಿದೆ.

ಇದರ ಪರಿಣಾಮ ಎಲ್ಲರೂ ಊಹಿಸುವಂಥದ್ದು. ಜನತಂತ್ರವು ಈ ದೇಶದಲ್ಲಿ ನಿದ್ದೆ ಹೊಡೆಯುತ್ತಿದೆ. ನೌಕರಶಾಹಿಯು ಪ್ರಜಾವರ್ಗವನ್ನು ಒತ್ತೆ ಸೆರೆ ಹಿಡಿದಿದೆ. ಪ್ರಜಾಪ್ರಭುತ್ವವು ಇದರ ಪರಿಣಾಮವಾಗಿಯೇ ಬರೀ ಬೂಟಾಟಿಕೆಯೆನಿಸಿದೆ. ಸಂಸತ್ತು ಹಾಗೂ ಶಾಸನ ಸಭೆಗಳು ರಚಿಸಿದ ಕಾನೂನುಗಳು ಅನುಷ್ಠಾನಕ್ಕೆ ಬಾರದೆ ಕಡತಗಳಲ್ಲಿ ನಿದ್ರಿಸುತ್ತಿವೆ. **ಬಲಾಢ್ಯರು ಈ ಕಾನೂನುಗಳ ಲೋಪ ದೋಷಗಳ ತೂತಿನ ಮೂಲಕ ನುಣುಚಿಕೊಂಡು** ಸ್ವಂತ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ.

ಇದರಿಂದೆಲ್ಲ ಆಗಿರುವುದಿಷ್ಟೆ: ನಮ್ಮ ರಾಷ್ಟ್ರವನ್ನು ಸಮಾಜವಾದಿ ಸಮಾಜದ ನೆಲೆಯಲ್ಲಿ ನಿರ್ಮಿಸಬೇಕೆಂದು ಸಂವಿಧಾನವನ್ನು ರಚಿಸಿಕೊಟ್ಟವರ ಆಶೋತ್ತರಗಳೆಲ್ಲ ಮಣ್ಣುಗೂಡಿವೆ. ಉಳ್ಳವರ ಹಾಗೂ ಇಲ್ಲದವರ ಅಂತರ ಇಲ್ಲಿ ಬೆಳೆಯುತ್ತಲೇ ಇದೆ. ನಗರ–ಗ್ರಾಮೀಣ ಭಿನ್ನತೆಯು ಹೆಚ್ಚುತ್ತಲೇ ಹೋಗಿದೆ.

ಅಧಿಕಾರ ಕೇಂದ್ರೀಕರಣದ ಪರಿಣಾಮವಾಗಿ ಆಡಳಿತೆಯ ಮೇಲೆ ಯಾರಿಗೂ ನಿಯಂತ್ರಣ ಇಲ್ಲವಾಗಿ ಬೇಜವಾಬ್ದಾರಿಯೆನಿಸಿದ, ಜನರಿಗೆ ಉತ್ತರ ಹೇಳಬೇಕಾದ ಹೊಣೆಗಾರಿಕೆಯಿಲ್ಲದ ನೌಕರ ಶಾಹಿಯ ಕೈಯಲ್ಲಿ ದೇಶದ ಭವಿಷ್ಯ ಸಿಕ್ಕಿರುವುದೇ ಈ ಎಲ್ಲ ರೋಗಕ್ಕೆ ಮೂಲ ಇಲ್ಲಿ ಹಳ್ಳಿಗಳ ನ್ಯಾಯದ ಕೂಗನ್ನು ನಗರವಾಸಿ ದಲ್ಲಾಳಿಗಳು ನೌಕರ ಶಾಹಿಯ ನೆರವಿನಿಂದ ಕಮರಿಸುತ್ತಾರೆ. ಪ್ರಾದೇಶಿಕ ಆಶೋತ್ತರಗಳನ್ನು ಐ. ಎ. ಎಸ್. ದೊರೆಗಳ ಹಿಂಡು ಹೊಸಕಿ ಹಾಕುತ್ತಿದೆ.

ಈ ದೇಶದ ಆಡಳಿತೆಗೇ ರೋಗ ಬಡಿದಿದೆ. ಇಲ್ಲಿನ ವ್ಯವಸ್ಥೆಯೇ ವಿಕೃತವಾಗಿದೆ. ಈ ವಿಕೃತಿಯ ಪರಿಣಾಮವೇ ಅಸ್ಸಾಮಿನಲ್ಲಿ ಭುಗಿಲೆದ್ದ "ಅನ್ಯ"ರ ವಿರೋಧಿಯಾದ ಚಳವಳಿ, ಪಂಜಾಬಿನಲ್ಲಿ ಕುದಿಯುತ್ತಿರುವ ಖಾಲಿಸ್ತಾನ ಪರವಾದ ಕ್ಷೋಭೆ. (ಇದೀಗ ಪ. ಬಂಗಾಳದಲ್ಲಿ ಸೇರಿ ಹೋಗಿರುವ ಗೂರ್ಖಾ ಜನಾಂಗದವರ ಚಳುವಳಿ. —ಸಂ.) ತಮಿಳ್ನಾಡಿನಲ್ಲಿ ಪ್ರಾದೇಶಿಕ ಆಶೋತ್ತರ ಸ್ವಾತಂತ್ರ್ಯ ಗಳಿಕೆಯ ಜೊತೆಗೇನೆ ಹುಟ್ಟಿಕೊಂಡಿತ್ತು. ಆಂಧ್ರಪ್ರದೇಶದಲ್ಲಿ ಅದು ತಲೆ ಎತ್ತಲು ಮತ್ತೆ ಮೂರು ದಶಕವೇ ಕಳೆಯಬೇಕಾಯಿತು.

ಇವೆಲ್ಲವೂ ಒಂದೇ ಕಡೆಗೆ ಬೆಟ್ಟು ಮಾಡುತ್ತಿವೆ. ನಮ್ಮ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಉಂಟಾಗಿರುವ ವಿಕೃತಿಯ ಕಡೆಗೆ. ನಮ್ಮ ಜನತಂತ್ರವು ತನ್ನ ಅರ್ಥವೆಲ್ಲವನ್ನೂ ಕಳೆದುಕೊಂಡಿದ್ದರ ಕಡೆಗೆ. ರಾಜಕೀಯ ಅಧಿಕಾರವು ಜನರ ಕೈಯಿಂದ ಜಾರಿ ಹೋಗಿ ಬೇರೆಲ್ಲೋ ಕೇಂದ್ರೀಕೃತವಾದದ್ದರ ಕಡೆಗೆ. **ಈ ದೇಶದ ಜನ ನಿಂತ ನೆಲದಲ್ಲೇ ಪರಕೀಯರಾಗುತ್ತಿರುವ ಕಡೆಗೆ.**

ಈ ವಿಕೃತಿಯನ್ನು ಸರಿಮಾಡುವ ನಿಟ್ಟಿನಲ್ಲಿ ಕೆಲಸ ಆಗಬೇಕು. ಆಳುವ ಹಕ್ಕನ್ನು ನಮ್ಮ ಜನರಿಗೆ ಮತ್ತೆ ತಂದುಕೊಡಬೇಕು. ಜನ ತಮ್ಮ ಭವಿಷ್ಯವನ್ನು ಆಶೋತ್ತರವನ್ನು ತಮಗೆ ಸರಿ ಕಂಡಂತೆ ರೂಪಿಸುವ ಅವಕಾಶ ತಂದು ಕೊಡಬೇಕು ಅಧಿಕಾರ ವಿಕೇಂದ್ರೀಕರಣದ ಮೂಲಕ ಇದನ್ನು ಮಾಡಬೇಕು. ಆಡಳಿತ ಘಟಕಗಳನ್ನು ಅಗತ್ಯವಿದ್ದರೆ ಇನ್ನಷ್ಟು ಸಣ್ಣದು ಮಾಡಬೇಕು. **ಜನರ ದೈನಂದಿನ ಜೀವನವನ್ನು ಬಾಧಿಸುವ ವಿಚಾರಗಳ ಆಳ್ವಿಕೆಯನ್ನೆಲ್ಲ ಕೇಂದ್ರ ಸರ್ಕಾರವು ರಾಜ್ಯ ಸರಕಾರಗಳಿಗೆ ಬಿಟ್ಟು ಕೊಡಬೇಕು. ಒಟ್ಟಂದದ ಉಸ್ತುವಾರಿ ಮಾತ್ರ ಅದರ ಕೈಯಲ್ಲಿದ್ದರೆ ಸಾಕು.** ರಾಜ್ಯಾಂಗವನ್ನು ಪುನರ್ರೂಪಿಸಬೇಕು. ಈ ದೇಶವನ್ನು ಸ್ವಯಮಾಧಿಕಾರ ಹೊಂದಿದ ರಾಜ್ಯಗಳ ಒಂದು ಸಡಿಲವಾದ ಒಕ್ಕೂಟವಾಗಿ ಮಾಡಬೇಕು. **ಜನರ ಆರ್ಥಿಕ-ಸಾಮಾಜಿಕ-ಶೈಕ್ಷಣಿಕ ಬದುಕನ್ನು ರೂಪಿಸುವ ಎಲ್ಲ ಅಧಿಕಾರ ಈ ರಾಜ್ಯಗಳಿಗೇ ಇರಬೇಕು.**

ಹೀಗೆ ಜನರ ಕೈಗೆ ನೈಜ ರಾಜ್ಯಾಧಿಕಾರ ಬಂದರೆ ಈ ಸಮಾಜವನ್ನು ಬಾಧಿಸುವ ಹತ್ತು ಹಲವು ಸಮಸ್ಯೆಗಳಿಗೆ ಸುಲಭದ ಪರಿಹಾರ ಕಂಡೀತು. ಯಾಕೆಂದರೆ ಸಮಸ್ಯೆಗಳನ್ನು ನಿವಾರಿಸಬೇಕಾದವರಿಗೆ ಅದರ ಸ್ವರೂಪ ಅರ್ಥವಾಗುವುದರಿಂದ ಪರಿಹಾರದ ದಾರಿಯೂ ಕಾಣಸಿಗುತ್ತದೆ. ನಮಗೆ ಬೇಕಾಗಿರುವ ಜನತಂತ್ರ ಇಂದಿನದಲ್ಲವೆಂದು ಸಾಬೀತಾಗಿರುವುದರಿಂದ **ಅರ್ಥಪೂರ್ಣ ಜನತಂತ್ರ ವ್ಯವಸ್ಥೆ ತರಬೇಕಾಗಿದೆ. ಅದು ರಾಜ್ಯಗಳ ಒಕ್ಕೂಟವಲ್ಲದೆ ಬೇರೆಯಲ್ಲ.**

○

(ಮೊದಲ ಪುಟದಿಂದ)

ಕೊಪ್ಪ ತಾಲ್ಲೂಕ್

ಬಿಂತ್ರವಳ್ಳಿ ಮಂಡಲ: ಜನತಾ–6 [ಬಿ.ಎಸ್. ಸುಬ್ರಮಣ್ಯ, ವಾಸು, ಸರೋಜ, ಬಿ.ಟಿ. ಹೂವಪ್ಪ, ಎಂ.ಸಿ. ಸತೀಶ್, ಕೃಷ್ಣಮೂರ್ತಿ]; ಕಾಂಗ್ರೆಸ್–10 [ಎಚ್ ಜಿ. ಚಂದ್ರಶೇಖರ, ಖಾದರ್, ನಾರಾಯಣ, ವನಜ ಕೃಷ್ಣ ಪೂಜಾರಿ, ಅಣ್ಣಯ್ಯ, ಜೆಸಿಂತಾ, ವಸಂತ ಅಜಿಲ, ಜಯಮ್ಮ, ಶೇಷಯ್ಯ, ಕೆ.ಎಸ್. ಶಾಂತಾರಾಂ]; ಪಕ್ಷೇತರ–1 [ಪಿ.ಜಿ. ಗುರ್ಜರ್ (ಅವಿರೋಧ)]

ಹರಂದೂರು ಮಂಡಲ: ಜನತಾ–4 [ಸರಸ್ವತಿ, ಶಂಕರನಾರಾಯಣ ಉಡುಪ, ಗೋಪಾಲ. ಡಿ. ನಾಗರಾಜ್]; ಕಾಂಗ್ರೆಸ್ -10 [ಡಿ ಟಿ. ಪಾಂಡುನಾಯ್ಕ, ಜಿ.ಎಸ್. ಶ್ರೀನಿವಾಸ್, ಕೆ.ಆರ್. ತಿಮ್ಮಪ್ಪ. ತೆರೆಸಾ, ಡಿ.ಎಸ್. ವಿಶ್ವನಾಥ ಶೆಟ್ಟಿ, ಜಿ.ಡಿ. ಪರಮೇಶ್ವರ, ಮಂಜಮ್ಮ, ಎಸ್.ಪಿ. ಚಂದ್ರಶೇಖರ್. ಸುಜಾತ, ದೂಜ]; ಪಕ್ಷೇತರ–1 (ಎಚ್.ಎಸ್. ರಮೇಶ್.)

ಅತ್ತಿಕೊಡಿಗೆ ಮಂಡಲ: ಜನತಾ–9 [ಬಿ.ಎಸ್. ಭಾಸ್ಕರ್, ಕೆ. ರಾಮಚಂದ್ರ ಡಿ. ಸುಲೋಚನ, ಜಿ.ಪಿ. ಮಂಜಪ್ಪ, ಜೆ. ಕೆ. ಶಿವಶಂಕರ, ರಾಮಯ್ಯ, ಪದ್ಮಾಕ್ಷಿ, ಕೆ.ಆರ್. ದೇವೇಂದ್ರ ಮತ್ತು ಬೆಳ್ಳಯ್ಯ (ಅವಿ.)]; ಕಾಂಗ್ರೆಸ್–6 [ಎ ಎಂ ಚಂದ್ರಶೇಖರ, ಸುಮಿತ್ರ, ವಾಲ್ಟರ್ ಡಿ'ಸೋಜ, ಕೆ ಆನಂದ್, ಎಲಿಜಬೆತ್, ಪುತ್ತುಂಜಿಯಾನೆ ಪಿ. ಹಮ್ಮಬ್ಬ.]

ಸರಸೀಪುರ ಮಂಡಲ: ಜನತಾ – 9 [ಡಿ.ಆರ್. ಪ್ರೇಮ, ಕೆ.ಆರ್. ರವೀಂದ್ರ, ಎಂ.ಆರ್. ಜಯಪ್ರಕಾಶ್, ಕಾಳಯ್ಯ, ಕೆ.ಎಸ್. ಕಾಡಪ್ಪಗೌಡ, ಸೀನಪ್ಪ, ಕೆ. ಎಸ್. ಪುಷ್ಪ, (ಅವಿ.) ಎ.ಎಸ್. ರಾಘವೇಂದ್ರ, ಬಿ.ಆರ್. ಸುಬ್ರಮಣ್ಯ]; ಕಾಂಗ್ರೆಸ್–3 [ಬಾಬು ಕುಂಡ, ಕು|| ಆರ್. ಭಾರತಿ, ಎಸ್.ಎಸ್. ರವೀಂದ್ರ.]

ತುಳುವಿನಕೊಪ್ಪ ಮಂಡಲ: ಜನತಾ –6 [ಎನ್.ವಿ. ಆನಂದರಾಮ ಭಟ್, ಅಪರ್ಣ, ಬಿ.ಎಸ್. ಅಣ್ಣು, ಸದಾಶಿವಯ್ಯ, ಕೆ. ರಾಮಯ್ಯ, ಮುತ್ತಮ್ಮ]; ಕಾಂಗ್ರೆಸ್ –5 [ಎನ್.ಟಿ ಪುಟ್ಟಪ್ಪ ಗೌಡ, ಜಯಪ್ರಕಾಶ್, ಎ.ಸಿ. ಕೃಷ್ಣಪ್ಪ, ಯಶೋದಮ್ಮ ಎನ್.ಎಂ ಮಂಜಯ್ಯ]; ಪಕ್ಷೇತರರು–2 [ತಿಮ್ಮಯ್ಯ, ಬಿ.ಕೆ. ರಮೇಶ ರಾವ್.]

ಹೇರೂರು ಮಂಡಲ: ಜನತಾ–12 [ರವೀಂದ್ರ, ಉಮಾದೇವಿ, ಸೀನ, ಲೋಕಪ್ಪಗೌಡ, ಕೌಸಲ್ಯ, ಕೃಷ್ಣ, ತಿಮ್ಮಪ್ಪಹೆಗ್ಡೆ ಕೆ. ರಾಮೇಗೌಡ, ಸದಾನಂದ, ದಯಾನಂದ, ಲಕ್ಷ್ಮಮ್ಮ, ಪಜಿಲ]; ಕಾಂಗ್ರೆಸ್ –5 [ಶ್ರೀನಿವಾಸ ನಾಯ್ಕ, ಬೋಬಮ್ಮ, ಮಂಜಯ್ಯ. ಎಸ್.ಕೆ. ಸುಬ್ರಮಣ್ಯ, ಸೀನ ಪೂಜಾರಿ]

ಹರಿಹರಪುರ ಮಂಡಲ: ಜನತಾ–7 [ಜಯಮ್ಮ, ಡಿ.ಎಚ್. ವಾಜೀದ್; ಎ. ಆರ್. ಜಯಪ್ರಕಾಶ್, ಬೆಳ್ಳಮ್ಮ, ಸೀತಮ್ಮ, ಬಿ.ಕೆ ಕೃಷ್ಣಶೆಟ್ಟಿ, ವಿ.ಡಿ. ನಾಗರಾಜ]; ಕಾಂಗ್ರೆಸ್–5 [ಜೆ.ಎಲ್. ರವೀಂದ್ರ, ಗೋಪಮ್ಮ, ಎ.ಎಸ್. ನಾಗೇಶ್, ಎ.ಎನ್. ಲಿಂಗಪ್ಪ ನಾಯ್ಕ, ದೊಡ್ಡ ಮಾಸ್ತಿ (ಅವಿ.); ಬಿಜೆಪಿ–3 [ಜೆ. ವಿ. ಭಾಗ್ಯಲಕ್ಷ್ಮಿ, ಪುಟ್ಟಯ್ಯ, ಬಿ.ಎಂ. ರಘುನಾಥ್); ಪಕ್ಷೇತರ–1 (ಬಿ.ಕೆ. ಗಣೇಶ ರಾವ್)

ಚಾವಲ್ಮನೆ ಮಂಡಲ: ಜನತಾ–7 [ಗೋಪಾಲ(ಅವಿ.), ಸಿ.ವಿ. ಸುವರ್ಣ, ಕೆ ಕೃಷ್ಣಪ್ಪ, ಎಸ್.ಕೆ ಸುಬ್ರಮಣ್ಯ, ಎಚ್ ಪಿ. ಗಾಯಿತ್ರಿ, ಎಚ್. ಎಸ್. ಜಯರಾಂ ಜೋಯಿಸ್, ಸಿ.ಆರ್. ನೀಲಕಂಠ ಭಟ್]; ಕಾಂಗ್ರೆಸ್-6 [ಇಂದಿರಮ್ಮ, ಕೃಷ್ಣಮೂರ್ತಿ ಸಾವಿತ್ರಮ್ಮ, ಯು.ಎಸ್. ಶಿವಪ್ಪ (ಅವಿ.) ಕೆ. ಎಂ ರೇವತಿ, ಎಚ್. ಆರ್. ಮಂಜುನಾಥ್]; ಪಕ್ಷೇತರ–3 [ಬಿ.ಆರ್. ಲಕ್ಷ್ಮೀನಾರಾಯಣ ಅಡಿಗ, ಎಂ ಎಸ್. ಶ್ರೀಪಾದ ಜೋಯಿಸ್, ಬಾಬಯ್ಯ.]

ಅಗಳಗಂಡಿ ಮಂಡಲ: ಜನತಾ–5 [ಎ.ಸಿ. ಜಗದೀಶ್, ಕೆ.ಆರ್. ಗೋಪಾಲಕೃಷ್ಣ, ಕುಮಾರಸ್ವಾಮಿ, ಟಿ. ಪ್ರಕಾಶ್, ದಾಕ್ಷಾಯಿಣಿ (ಅವಿ.)]; ಕಾಂಗ್ರೆಸ್–7 [ಮಾಧು, ರಂಗಣ್ಣ, ಸೂರಯ್ಯ, ಕೆ.ಸಿ ಸತೀಶ್, ನಾರಾಯಣ ಗೌಡ, ಎಂ.ಎಸ್. ಲೀಲಾ, ಶೀನ]; ಪಕ್ಷೇತರ–1 (ಬಿ.ಎಸ್. ನಾಗೇಶ ಭಟ್)

ನಿಲುವಾಗಿಲು ಮಂಡಲ: ಜನತಾ–6 [ವಿಠಲ ನಾಯ್ಕ, ಎಚ್.ಎಂ ಕೃಷ್ಣಮೂರ್ತಿ, ನಾಗಮ್ಮ, ಕೆ ಬಿ. ರಾಮಚಂದ್ರ, ವಿಶಾಲಾಕ್ಷಿ. ಡಿ ವಿ. ಶ್ರೀನಿವಾಸ]; ಕಾಂಗ್ರೆಸ್–6 [ಎಂ ಎಸ್. ರವೀಂದ್ರ, ಎನ್.ಪಿ. ಶಂಕರಪ್ಪ ನಾಯ್ಕ, ಪದ್ಮಾವತಿ, ಮಂಜಣ್ಣ, ಟಿ.ಎಸ್. ರವಿ, ಗಿಡ್ಡಣ್ಣ]

ಜಯಪುರ ಮಂಡಲ: ಜನತಾ–7 [ಜಿ.ಸಿ. ಗೋಪಾಲಕೃಷ್ಣ, ಶ್ಯಾಮಲ, ವಿ. ನಾಗರತ್ನ, (ಅವಿ.), ಮಾಗೆ ಚಂದ್ರಶೇಖರ, ನಾಗರತ್ನ, ಶೇಖರ, ಕಿಶೋರ್ ಕುಮಾರ] ಕಾಂಗ್ರೆಸ್–10 [ರಾಘು, ಸ್ಟೀನ ಶ್ಯಾಸ್ತ್ರಲೀನ, ಎಸ್.ಎ. ಸುಂದರ, ಎ. ಸೆಲ್ವರಾಜ್, ಎನ್.ಜೆ.ಬಿ. ಸುಮತಿ, ಡೆನಿಸ್ ಡಿ'ಸೋಜ, ಕೆ. ಶೇಖರ, ವಿ. ಕಣ್ಣನ್, ಎ. ಸಿ. ಪಜ್ರಪ್ಪ. ಎಸ್.ಜಿ. ಚಂದ್ರಶೇಖರ]; ಪಕ್ಷೇತರ–1 (ಕೆ. ಅಬ್ದುಲ್ಲ.)

ಮತದಾರರಿಗೆ ಕೃತಜ್ಞತೆಗಳು

ತುಳುವಿನಕೊಪ್ಪ ಮಂಡಲ ಪಂಚಾಯ್ತಿಗೆ ಸ್ಪರ್ಧಿಸಿದ್ದ ನನಗೆ ಮತ ನೀಡಿ ಜಯಶೀಲನನ್ನಾಗಿಸಿದ ಎಲ್ಲ ಮತದಾರ ಬಂಧುಗಳಿಗೂ, ನನ್ನ ಗೆಲುವಿಗೆ ಶ್ರಮಿಸಿದ ಕಾರ್ಯಕರ್ತ ಮಿತ್ರರಿಗೂ ಹಾಗೂ ನೆರವು–ಸಹಕಾರ ನೀಡಿದ ಎಲ್ಲ ಅಭಿಮಾನಿಗಳಿಗೂ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಿಮ್ಮೆಲ್ಲರ ವಿಶ್ವಾಸ ನನ್ನ ಮೇಲೆ ಸದಾ ಇರಲೆಂದು ಆಶಿಸುತ್ತೇನೆ.

ಎನ್ ಟಿ ಪುಟ್ಟಪ್ಪ ಗೌಡ,
ನಿಡದಳ್ಳಿ – ಉತ್ತಮೇಶ್ವರ

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.